Papers laid on the Table

Secretary.—I beg to lay on the table of the House a copy of the Karnataka Lokayukta Bill, 1984, as passed by the Legislative Council under Rule 109 of the Rules of Procedure and Conduct of Business in the Karnataka Legislative Assembly.

Mr. Speaker.—Papers laid.

Mr. Speaker.—Calling attention matters. ....

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೇ, ಕರ್ನಾಟಕದಲ್ಲಿ ತಮಗೆ ಸಂಪೂರ್ಣವಾಗಿ ಕನ್ನಡಿಗರ ಬೆಂಬಲ ಇದೆ. ಅಲ್ಪಸಂಖ್ಯಾತರು ಕನ್ನಡಿಗರ ಮೇಲೆ ಬಿದ್ದು ನೋವನ್ನುಂಟು ಮಾಡುತ್ತಿದ್ದಾರೆ. ತಾವು ಇದರ ಬಗ್ಗೆ ಯೋಚನೆ ಮಾಡಿ ನೋಡಿ.

Mr. Speaker.—It will not go to record. No discussion under rule 334. ತಾವು ಕುಳಿತುಕೊಳ್ಳಿ. ಬಹಳ ಜನ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿ ತಿಂಗಳಾನುಗಟ್ಟಲೆಯಿಂದ ಕಾಯುತ್ತಿದ್ದಾರೆ. ನಿಮ್ಮ ವಿಷಯ ಒಂದು ಸಾರಿ ಪ್ರಸ್ತಾಪ ಮಾಡಿದ ಮೇಲೆ ಮತ್ತೆ ಪ್ರಸ್ತಾಪ ಮಾಡಲು ಅವಕಾಶ ಇಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಕೆ.ಜಿ.ಎಫ್, ನಲ್ಲಿ ಕನ್ನಡ ಚಿತ್ರವನ್ನು ಹಾಕುವ ಹಾಗೆಯೇ ಇಲ್ಲ. ಅಲ್ಪಸಂಖ್ಯಾತರು ಕನ್ನಡಿಗರಿಗೆ ತೊಂದರೆ ಕೊಡುತ್ತಿದ್ದಾರೆ. ತಾವು ಈ ಬಗ್ಗೆ ಯೋಚನೆ ಮಾಡಬೇಕು.... ...

Mr. Speaker.—It will not go to record.

ಗಮನ ಸೆಳೆಯುವ ಸೂಚನೆ

ವಿಷಯ : ಉತ್ತರ ಕರ್ನಾಟಕ ಭಾಗದಲ್ಲಿ ಪ್ರೌಢ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಪದವೀಧರ ಶಾರೀರಕ ಶಿಕ್ಷಕರಿಗೆ ವೇತನ ಶ್ರೇಣಿಯಲ್ಲಿ ಅನ್ಯಾಯವಾಗಿರುವ ಬಗ್ಗೆ

ಶ್ರೀ ಪಿ. ಎಸ್. ರಾಣೆ.—ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕ ಭಾಗದಲ್ಲಿ ಸಹಾಯ ಧನ ಪಡೆಯುತ್ತಾ ಇರತಕ್ಕಂಥ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ಪದವೀಧರರ ಶಾರೀರಕ ಶಿಕ್ಷಣ ಶಿಕ್ಷಕರಿಗೆ ವೇತನ ಶ್ರೇಣಿ ಕೊಡುವಾಗ ಬಹಳ ಅನ್ಯಾಯವಾಗಿದೆ ಎನ್ನುವುದರ ಬಗ್ಗೆ ಧಾರವಾಡದ ಡಿ.ಡಿ.ಪಿ.ಐ. ಅವರ ಕಛೇರಿ ಮುಂದೆ ಅನ್ನ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಅವರು ಇದರ ಬಗ್ಗೆ ಅನೇಕ ಮನವಿಗಳನ್ನೂ ಸಹ ಸಲ್ಲಿಸಿದ್ದಾರೆ, 1971ರಲ್ಲಿ ಸರ್ಕಾರ ಈ ಬಗ್ಗೆ ಆಜ್ಞೆ ಹೊರಡಿಸಿದ್ದರೂ ಸಹ ಕೆಲವರಿಗೆ ಕೊಟ್ಟು ಕೆಲವರಿಗೆ ಕೊಡದೇ ಇದ್ದಾರೆ. ಆದುದರಿಂದ ಇದರ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಬಿ. ರಾಚಯ್ಯ (ವಿದ್ಯಾ ಮಂತ್ರಿಗಳು).—

ಪ್ರೌಢ ಶಾಲೆಗಳಲ್ಲಿ ಎರಡು ವರ್ಗದ ಶಾರೀರಕ ಶಿಕ್ಷಣ ಶಿಕ್ಷಕರಿದ್ದಾರೆ :—1. ಶಾರೀರಕ ಶಿಕ್ಷಕರು (ಶ್ರೇಣಿ–1) ಮತ್ತು (2) ಶಾರೀರಕ ಶಿಕ್ಷಣ ಶಿಕ್ಷಕರು (ಶ್ರೇಣಿ–2). ಈ ಹುದ್ದೆಗಳ ವೇತನ ಶ್ರೇಣಿ ಮತ್ತು ಈ ಹುದ್ದೆಗಳಿಗೆ ನಿಗದಿ ಪಡಿಸಿರುವ ವಿದ್ಯಾರ್ಹತೆ ಈ ಕೆಳಕಂಡದಂತಿದೆ.—

ಹುದ್ದೆಯ ಪದನಾಮ	ವೇತನ ಶ್ರೇಣಿ	ವಿದ್ಯಾರ್ಹತೆ
	ರೂ.	
ಶಾರೀರಕ ಶಿಕ್ಷಣ ಶಿಕ್ಷಕರು (ಶ್ರೇಣಿ-1)	750–1500	ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದ ಬಿ.ಪಿ.ಎಚ್ (ಶಾರೀರಕ ಶಿಕ್ಷಣದಲ್ಲಿ ಪದವಿ : ಶಾರೀರಕ ಶಿಕ್ಷಣದಲ್ಲಿ ಡಿಪ್ಲೊಮೋ.
ಶಾರೀರಕ ಶಿಕ್ಷಣ ಶಿಕ್ಷಕರು (ಶ್ರೇಣಿ-2)	550–1050	ಎಸ್.ಎಸ್.ಎಲ್.ಸಿ. ಮತ್ತು ಸಿ.ಪಿ.ಎಡ್. (ಶಾರೀರಕ ಶಿಕ್ಷಣದಲ್ಲಿ ಸರ್ಟಿಫಿಕೇಟ್) ಅಥವಾ ತತ್ಸಮ ವಿದ್ಯಾರ್ಹತೆ.